**O.S.87/2016 P.W.3**

ದಿನಾಂಕಃ **16.03.2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃಪ್ರತಿವಾದಿಯ ಪರ ಮಾನ್ಯ ಶ್ರೀ **MHSK** ವಕೀಲರಿಂದಃ</u>

ವಾದಿ ಮತ್ತು ನಾನು ಒಂದೇ ಚರ್ಚಿಗೆ ಸಂಬಂಧಪಟ್ಟವರಾದ ಕಾರಣ ನನಗೆ 50 ವರ್ಷಗಳಿಂದ ಪರಿಚಯ ಇರುತ್ತದೆ. ನಾನು ನಮ್ಮ ಊರಿನಲ್ಲಿ ನಮ್ಮ ಧರ್ಮದವರಿಗೆ ಮುಖ್ಯಸ್ಥರಾಗಿ ರಾಜೀ ಪಂಚಾಯಿತಿಯನ್ನು ಮಾಡುತ್ತೇನೆ. ಭೂ ಸುಧಾರಣೆಯಡಿಯಲ್ಲಿ ಭೂಮಿಯ ಮಂಜೂರಾತಿಗಾಗಿ ಅರ್ಜಿ ಹಾಕಲು ಸದರಿ ವ್ಯಕ್ತಿಯ ಅದರ ಸ್ವಾಧೀನಾನುಭದಲ್ಲಿ ಮತ್ತು ಅದರಲ್ಲಿ ಕೃಷಿ ಮಾಡುತ್ತಿರಬೇಕು ಎಂದರೆ ಸರಿ. ಹಾಗಿದ್ದಲ್ಲಿ ಮಾತ್ರ ಭೂ ಸುಧಾರಣೆಯಡಿಯಲ್ಲಿ ಭೂಮಿಯ ಮಂಜೂರಾತಿ ಪತ್ರವನ್ನು ನೀಡುತ್ತಾರೆ ಎಂದರೆ ಸರಿ.

ಪ್ರತಿವಾದಿ ವ್ಯವಹಾರಿಕವಾಗಿ ಶುದ್ಧ ಚರಿತ್ರೆ ಇರುವ ವ್ಯಕ್ತಿ ಎಂದರೆ ನಾನು ನೋಡಿರುವ ಹಾಗೇ ಸರಿ.

ದಾವಾ ಸರ್ವೇ ನಂಬರಿಗೂ ಹಾಗೂ ನಾನು ವಾಸವಾಗಿರುವ ಜಾಗಕ್ಕೂ 4-5 ಕಿಮೀ ದೂರ ಆಗುತ್ತದೆ. ದಾವಾ ಜಮೀನಿನ ಬಗ್ಗೆ ಬೇರೆ ಯಾವುದೇ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ, ನಾನು ಊರಿನ ಯಜಮಾನ ಆದ ಕಾರಣ ಅದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ಊರಿನಲ್ಲಿ ಇರುವ ಎಷ್ಟು ಕುಟುಂಬಗಳ ಸಾಗುವಳಿ, ಸ್ವಾಧೀನದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ನಮ್ಮ ಧರ್ಮದವರಲ್ಲಿ ವಾದಿಯ ಜಮೀನಿನ ಬಗ್ಗೆ ಮಾತ್ರ ಮಾಹಿತಿ ಇರುತ್ತದೆ.

ನಾನು ಮೂಡಿಗೆರೆ ತಾಲ್ಲೂಕಿಗೆ ಸೇರಿರುತ್ತೇನೆ ಎಂದರೆ ಸರಿ. ದಾವಾ ಜಮೀನಿನ ಅಜುಬಾಜುದಾರರು ನಾನು ಆಗಿರುವುದಿಲ್ಲ ಎಂದರೆ ಸರಿ. ದಾವಾ ಜಮೀನಿನ ಅಜುಬಾಜುದಾರರು ಯಾರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಚಕ್ಕುಬಂದಿ ಮತ್ತು ಅದರ ಸುತ್ತಲು ಯಾರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಈಗಿನ ವಾಸ್ತವ ಸ್ಥಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ, ಈಗ ಭತ್ತ ಬೆಳೆಯುತ್ತಿದ್ದಾರೆ. ನನಗೆ ಯಾವುದಾದರು ಒಂದು ಜಾಗಕ್ಕೆ ಕರೆದುಕೊಂಡು ಹೋದರೆ ಅದು ಯಾರಿಗೆ ಸೇರುತ್ತದೆ ಎಂದು ಹೇಳಲು ಆಗುವುದಿಲ್ಲ.

ನಾನು ವಾದಿಯೊಂದಿಗೆ ಶಾಮಿಲಾಗಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ನಾನು ಪಂಚಾಯಿತಿ ಮಾಡಿದ ಕಾರಣ ವಾದಿಯ ಜಮೀನಿನ ಬಗ್ಗೆ ಹೇಳಬಹುದು.

ಪಂಚಾಯಿತಿ ಆದ ನಂತರ ರಾಜೀ ತೀರ್ಮಾನವನ್ನು ಒಂದು ಸರಿಯಾದ ಮೌಲ್ಯದ ಸ್ಟ್ಯಾಂಪ್ ಪೇಪರ್ ಮೇಲೆ ಅದನ್ನು ದಾಖಲು ಮಾಡಿದ್ದಲ್ಲಿ ಮಾತ್ರ ಅದು ಕಾನೂನಿನಡಿಯಲ್ಲಿ ಮಾನ್ಯವಾಗಿರುತ್ತದೆ ಎಂದರೆ ಸರಿ.

ನನ್ನ ಪ್ರಮಾಣಪತ್ರದಲ್ಲಿ ನನ್ನ ತಂದೆಯ ಹೆಸರು, ಗ್ರಾಮದ ಬಗ್ಗೆ ನಾನೇ ಖುದ್ದು ಮಾಹಿತಿ ನೀಡಿರುತ್ತೇನೆ, ಅವರು ಕೇಳಿದ ಕಾರಣ ನೀಡಿರುತ್ತೇನೆ. ಯಾವಾಗ ಮಾಹಿತಿಯನ್ನು ನೀಡಿರುತ್ತೇನೆ ಎಂದು ಬಹಳ ದಿನಗಳಾದ ಕಾರಣ ಈಗ ನೆನಪಿಲ್ಲ.

ಎಂ ಡಿ ಶಂಕರಯ್ಯ ರವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎಂ ಡಿ ಶಂಕರಯ್ಯ ಎನ್ನುವ ವ್ಯಕ್ತಿ ಮತ್ತು ದಾವಾ ಜಮೀನಿಗೆ ಸಂಬಂಧಪಟ್ಟ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಂ ಡಿ ಶಂಕರಯ್ಯ ರವರು ಯಾವುದಾದರು ಪಾತ್ರವನ್ನು ವಹಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.